**ತಪಸ್ಸು, ದಮ ಮತ್ತು ಕರ್ಮ ಇವು ಬ್ರಹ್ಮವಿದ್ಯೆಗೆ ತಳಪಾಯ;**
**ವೇದಗಳು ಅದರ ಅಂಗಗಳು; ಮತ್ತು ಸತ್ಯವು ಅದರ ಆಶ್ರಯ. –ಕೇನೋಪನಿಷತ್**

ಇದರಿಂದ ಅರ್ಥವಾಗುವ ಮುಖ್ಯ ವಿಷಯವೆಂದರೆ, ಬ್ರಹ್ಮ ಸಾಕ್ಷಾತ್ಕಾರ ಪಡೆಯಲಿಚ್ಛಿಸುವ ಸಾಧಕನು, ತನ್ನ ಅಹಂಕಾರವನ್ನು ಸಂಪೂರ್ಣವಾಗಿ ತ್ಯಜಿಸಿ, ಬ್ರಹ್ಮವು ಎಲ್ಲ ಜೀವಿಗಳ ಅಂತರಾಳದಲ್ಲಿ ಸಚ್ಚಿದಾನಂದ ಸ್ವರೂಪನಾಗಿ ನೆಲೆಸಿರುವುದೆಂದು ಪೂರ್ಣಶ್ರದ್ಧೆಯಿಂದ ನಂಬಿ ಗುರುವಿನಿಂದ ಉಪದೇಶ ಪಡೆದು, ಶಾಸ್ತ್ರಾಧ್ಯಯನದಿಂದ ಆ ಉಪದೇಶದ ಸತ್ಯತೆಯನ್ನು ಖಚಿತಪಡಿಸಿಕೊಂಡು ತಪಸ್ಸು, ದಮ, ಕರ್ಮ ಮುಂತಾದ ಸಾಧನೆಗಳಿಂದ ಮನಸ್ಸನ್ನು ಶುದ್ಧಗೊಳಿಸಿಕೊಂಡು, ಆ ಬ್ರಹ್ಮವನ್ನು ತನ್ನ ಮನಸ್ಸಿನಲ್ಲಿ ಸಾಕ್ಷಾತ್ಕಾರಿಸಿಕೊಳ್ಳಲು ಯತ್ನಿಸಬೇಕು. ಬ್ರಹ್ಮಸಾಕ್ಷಾತ್ಕಾರವಾದರೆ ಸಾಧಕನು ಸಂಸಾರದಿಂದ ಬಿಡುಗಡೆ ಹೊಂದಿ ನಿರಂತರ ಆತ್ಮಾನಂದದಲ್ಲಿ ಮುಳುಗಿ, ತಾನು ಜೀವವಲ್ಲ, ಬ್ರಹ್ಮಸ್ವರೂಪ ಎಂಬ ಜ್ಞಾನವನ್ನು ಪಡೆಯುತ್ತಾನೆ.

(ಆಧಾರ : *ಕೇನೋಪನಿಷತ್*)

# ಪ್ರಹಸನ ಪ್ರಸಂಗ

**ಹ**ಳ್ಳಿಯಲ್ಲಿ ಒಂದು ಪಾಠಶಾಲೆ. ಅದು ಸರ್ಕಾರೀ ಶಾಲೆಯಾದ್ದರಿಂದ ಭಗ್ನಾವಸ್ಥೆಯಲ್ಲಿತ್ತು. ಉಪಾಧ್ಯಾಯರಿಗಾಗಲಿ, ವಿದ್ಯಾರ್ಥಿಗಳಿಗಾಗಲಿ ಪಾಠದಲ್ಲಿ ಆಸಕ್ತಿ ಇರಲಿಲ್ಲ. ಆಕಸ್ಮಿಕವಾಗಿ ಆ ಶಾಲೆಗೆ ಬೆಂಕಿ ಬಿತ್ತು. ವಿದ್ಯಾರ್ಥಿಗಳಿಗೆ ಸಂಭ್ರಮವೋ ಸಂಭ್ರಮ. ಎಲ್ಲರೂ ಅದು ಉರಿಯುತ್ತಿರುವುದನ್ನು ನೋಡಿ ಚಪ್ಪಾಳೆ ತಟ್ಟುತ್ತ, ಕುಣಿಯುತ್ತ ನಗತೊಡಗಿದರು.

ಊರಿನವರಿಗೆ ಇದನ್ನು ನೋಡಿ ಆಶ್ಚರ್ಯವಾಯಿತು. ಅವರು ವಿದ್ಯಾರ್ಥಿಗಳನ್ನು ವಿಚಾರಿಸಿದರು: "ಏನಪ್ಪ ಇದು! ಶಾಲೆ ಉರೀತಾ ಇದೆ, ನೀವು ಬೆಂಕಿ ಆರಿಸುವುದು ಬಿಟ್ಟು ನಗ್ತಾ ಇದ್ದೀರಲ್ಲಪ್ಪ?"

"ನಾಳೆಯಿಂದ ಕ್ಲಾಸ್ ಇಲ್ಲವಲ್ಲ, ಅದಕ್ಕೇ ಇಷ್ಟು ಸಂತೋಷ"—ವಿದ್ಯಾರ್ಥಿಗಳು ಹೇಳಿದರು.

ದೂರದಲ್ಲಿ ಒಬ್ಬ ವಿದ್ಯಾರ್ಥಿ ಮಾತ್ರ ಅಳುತ್ತ ನಿಂತುಕೊಂಡಿದ್ದ. ಒಬ್ಬನಾದರೂ ದುಃಖಪಡುವವನಿದ್ದಾನಲ್ಲ ಎಂದು ಜನರಿಗೆ ಸ್ವಲ್ಪ ಸಮಾಧಾನವಾಯಿತು. ಅವರಲ್ಲಿ ಒಬ್ಬರು ಹೋಗಿ ಆ ಹುಡುಗನನ್ನು ವಿಚಾರಿಸಿದರು: "ಏಕೊ ಮಗು ಅಳ್ತಾ ಇದ್ದೀಯ? ಏನಾಯ್ತಪ್ಪ? ಶಾಲೆ ಹೋಯ್ತಲ್ಲ ಎಂದು ದುಃಖಾನೆ?"

"ಇಲ್ಲ. ಉಪಾಧ್ಯಾಯರು ಹೊರಗಡೇನೇ ಉಳಕಂಡು ಬಿಟ್ಟಿದ್ದಾರೆ" ಎಂದು ಹೇಳುತ್ತ ಆತ ಮತ್ತೆ ಬಿಕ್ಕಿ ಬಿಕ್ಕಿ ಅಳತೊಡಗಿದ.

ಈ ವಿದ್ಯಾರ್ಥಿಗಳಂತೆ ನಮ್ಮ ಪ್ರಸ್ತುತ ಕಷ್ಟಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಒಂದು ಕಷ್ಟ ತಪ್ಪಿದಾಗ ಸಂತೋಷಿಸುತ್ತೇವೆ. ಆದರೆ ಆ ಸಂತೋಷ ತಾತ್ಕಾಲಿಕ. ಆ ಕಷ್ಟ ಇನ್ನೂ ಭೂತಾಕಾರದಿಂದ ಮತ್ತೆ ಬರಬಹುದು. ನಾವು ಅನುಭವಿಸಬೇಕಾದುದನ್ನು ಅನುಭವಿಸಿಯೇ ತೀರಿಸ ಬೇಕಾಗುತ್ತದೆ. ಅದನ್ನು ಮುಂದೂಡುವುದರಿಂದ ಪ್ರಯೋಜನ ವಿಲ್ಲ. ನಾವು ಎದುರಿಸಬೇಕಾದ ಕಷ್ಟಗಳನ್ನು ವಾಸ್ತವದೃಷ್ಟಿಯಿಂದ ಸ್ವೀಕರಿಸುವ ಮಾನಸಿಕ ಪಕ್ವತೆಯನ್ನು ನಾವು ಹೊಂದಿರಬೇಕು.

❄❄❄❄

ಮೂವರು ಸ್ನೇಹಿತರು ಸ್ವರ್ಗದ ಬಾಗಿಲಿನಲ್ಲಿ ಬಂದು ನಿಂತರು. ದ್ವಾರಪಾಲಕನು ಅವರಿಗೆ ಒಂದು ಪ್ರಶ್ನೆಯನ್ನು ಕೇಳಿದನು: "ನಿಮ್ಮ ಶವಸಂಸ್ಕಾರದ ಸಮಯದಲ್ಲಿ ನಿಮ್ಮ ಸಂಬಂಧಿಕರು ಮತ್ತು ಸ್ನೇಹಿತರಿಂದ ಯಾವ ಪ್ರತಿಕ್ರಿಯೆಯನ್ನು ನೀವು ನಿರೀಕ್ಷಿಸುತ್ತೀರಿ?"

ಒಬ್ಬನು ಹೇಳಿದ: "ನಾನೊಬ್ಬ ಶ್ರೇಷ್ಠ ವೈದ್ಯನೆಂದೂ ಒಳ್ಳೆಯ ಗೃಹಸ್ಥನೆಂದೂ ಅವರು ಹೇಳಬೇಕೆಂದು ಬಯಸುತ್ತೇನೆ."

ಇನ್ನೊಬ್ಬನು ಹೇಳಿದ: "ನಾನೊಬ್ಬ ಉಪಾಧ್ಯಾಯನಾಗಿ ಹಲವರು ಉತ್ತಮ ಜೀವನ ನಡೆಸುವಂತೆ ಮಾಡಿದ್ದೇನೆ ಎಂದು ಅವರು ಮಾತನಾಡಿಕೊಳ್ಳುವುದನ್ನು ಕೇಳಬಯಸುತ್ತೇನೆ."

ಮೂರನೆಯವನು ಹೇಳಿದ: "ಆದರೆ ನನ್ನ ಬಯಕೆಯೇ ಬೇರೆ. 'ನೋಡಿ ನೋಡಿ, ಅವನು ಚಲಿಸುತ್ತಿದ್ದಾನೆ!' ಎಂದು ಅವರು ಹೇಳುವುದನ್ನು ಬಯಸುತ್ತೇನೆ."

ಎಲ್ಲರೂ ಜೀವಿಸುವುದನ್ನು ಬಯಸುತ್ತಾರೆ. ಆದರೆ ಸಾರ್ಥಕ ಜೀವನವನ್ನು ಬಯಸುವವರು ಕೆಲವರು ಮಾತ್ರ. ಸತ್ತ ವ್ಯಕ್ತಿಯೂ ಬದುಕಿಬರಲೆಂದು ಜನರು ಬಯಸುವಷ್ಟು ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗುವಂತೆ ನಾವು ಬಾಳಬೇಕು. "ಸದ್ಯ, ತೊಲಗಿದನಲ್ಲ" ಎನ್ನುವಂತಾಗಬಾರದು.

*